ಅರಣ್ಯ ಪ್ರದೇಶದಲ್ಲಿ ವಾಸಿಸುವ ಹರಿಜನ–ಗಿರಿಜನರ ಯೋಜನೆಗಳ ಸೌಲಭ್ಯದ ಬಗ್ಗೆ

ಶ್ರೀಮತಿ ಸುಮಾವಸಂತ್ (ವಿರಾಜಪೇಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧ ಅರಣ್ಯ ಇಲಾಖೆಯಲ್ಲಿ ದುಡಿಯುತ್ತಿರುವ ಗಿರಿಜನರಿಗೆ ಇದುವರೆವಿಗೂ ಗಿರಿಜನ ಯೋಜನಾನ್ವಯ ಅನುಕೂಲಗಳನ್ನು ಸರ್ಕಾರದವರು ಒದಗಿಸದೇ ಇರಲು ಕಾರಣವೇನು ?

೨ ಗಿರಿಜನ ಯೋಜನೆಯಲ್ಲಿ ವಂಚಿತರಾದವರ ಗಿರಿಜನರ ಸಂಖ್ಯೆ ಎಷ್ಟು ?

೩ ಹಾಗಿದ್ದಲ್ಲಿ ಇವರನ್ನು ಈ ಯೋಜನೆಗೆ ಅಳವಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜಿ. ಎಸ್. ಬಾಗಲಕೋಟ್(ಅರಣ್ಯ ರಾಜ್ಯ ಮಂತ್ರಿಗಳು).

೧ ಅರಣ್ಯ ಪ್ರದೇಶದಲ್ಲಿ ದುಡಿಯುತ್ತಿರುವ ಗಿರಿಜನರಿಗೆ ಸರ್ಕಾರದ ನಿಯಮಗಳಂತೆ ಅನುಕೂಲತೆಗಳನ್ನು ಒದಗಿಸಲಾಗಿದೆ.

೨ ಇದರ ಬಗ್ಗೆ ವಂಚಿತರಾದವರು ಯಾರೂ ಇಲ್ಲ.

೩ ಉದ್ಭವಿಸುವುದಿಲ್ಲ.

ಮಂಡಿಕೇರಿ ತಾಲ್ಲೂಕಿನ ಗಾಳಿ ಬೀಡು ಬಳಿ ಚಹ ತೋಟಕ್ಕೆ ಖಾಸಗಿಯವರ ಪಾಲಂಗಾರಿಕೆ ಬಗ್ಗೆ

೫೯೦. ಶ್ರೀಮತಿ ಸುಮಾ ವಸಂತ್ (ವಿರಾಜ ಪೇಟೆ) — ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡಿಕೇರಿ ತಾಲ್ಲೂಕಿನ ಗಾಳಿಬೀಡಿನ ಬಳಿ ನಿರ್ಮಿಸಲು ಉದ್ದೇಶಿಸಿರುವ ಚಹಾ ತೋಟ ಪಾಲುಗಾರಿಕೆಯನ್ನು ಜಿಲ್ಲಾ ಪರಿಷತ್ತಿಗೆ ನೀಡದೆ ಖಾಸಗಿಯವರಿಗೆ ನೀಡುವ ಸರ್ಕಾರದವರ ಉದ್ದೇಶವೇನು?

ಆ) ಈ ಚಹಾ ತೋಟದ ಯೋಜನೆಯಿಂದ ಅರಣ್ಯ ನಾಶವಾಗುತ್ತಿರುವ ಶಂಕೆ ಸರ್ಕಾರಕ್ಕೆ ಇದೆಯೇ?

ಇ) ಚಹಾ ತೋಟದ ಯೋಜನೆ ಹಾಗೂ ಕಾರ್ಯಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಚಹಾ ತೋಟ ಅಭಿವೃದ್ಧಿಯ ಯೋಜನೆಯು ಪ್ರಾಮುಖ್ಯವಾಗಿ ತಾಂತ್ರಿಕ ಕುಶಲತೆಯನ್ನು ಅಳವಡಿಸಬೇಕಾದ ಅವಶ್ಯಕತೆಯ ಪರಿಮಿತಿಗೆ ಒಳಪಟ್ಟಿದೆ ಇದನ್ನು ಗಳಿಸಬೇಕಾದ ರೀತಿಯು ಇಲಾಖೆಯ ತಾಂತ್ರಿಕ ಅನುಭವವನ್ನು ಖಾಸಗಿ ವಲಯದ ಅನುಭವದೊಂದಿಗೆ, ಮಿಳಿತಗೊಳಿಸಿ ಪಡೆಯುವುದು ಔಚಿತ್ಯವಾದ ಕಾರಣ ಜಂಟಿ ವಲಯ ಸಂಸ್ಥೆಯೊಂದನ್ನು ಕಾರ್ಯರೂಪಕ್ಕೆ ತರುವ ಯೋಜನೆಯಂ ಅಸ್ತಿತ್ವಕ್ಕೆ ಬರಬೇಕಾಗಿದೆ. ಈ ದಿಸೆಯಲ್ಲಿ ಜಿಲ್ಲಾ ಪರಿಷತ್ತಿನ ರೂಪರೇಷೆಯಂ ಈಗಾಗಲೇ ಬಹು ವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಿಲ್ಲಾವಮಟ್ಟದಲಿ ಕೈಗೊಳ್ಳಬೇಕಾದ ಪ್ರಯುಕ್ತ ಇಂತಹ ತಾಂತ್ರಿಕ ಮಾಹಿತಿ ಪೂರಕ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು ಔಚಿತ್ಯವಾಗಲಾರದು.

ಆ) ಚಹಾ ತೋಟದ ಯೋಜನೆಗೆ ನಿಗಧಿಪಡಿಸಿದ ಪ್ರದೇಶವು ಗಿಡ ಮರಗಳಿಲ್ಲದ ಹುಲ್ಲಾ ಬೆಳೆಯುವ ಪ್ರದೇಶ. ಆದರಲ್ಲಿ ಹುಲುಸಾಗಿ ಬೆಳೆಯುವ ಅರಣ್ಯ ಪ್ರದೇಶವಿಲ್ಲ. ಆ ಪ್ರಯುಕ್ತ ಯೋಜನೆಗೆ ಅಳವಡಿಸುವ ಪ್ರದೇಶವೆ ಸಿ ಮಾರ್ಪಡಿ ವರ್ಗದ ಜಮೀನು ಆಗಿದ್ದು ಕೈಗೊಳ್ಳುವ ಯೋಜನೆಯಿಂದ ಅರಣ್ಯ ನಾಶವಾಗುವ ಪ್ರಮೇಯವಿಲ್ಲ. ಬದಲಾಗಿ ಜಾಮೀನಿನ ಗುಣಮಟ್ಟಕ್ಕೆ ಅನುಸಾರವಾಗಿ ಬೆಳೆಯುವ ಅರಣ್ಯ ಅಭಿವೃದ್ಧಿ ಕಾರ್ಯ ಕ್ರಮಕ್ಕೆ ಅದು ಅನುವು ಮಾಡಿಕೊಡಬಹುದಾಗಿದೆ.